ಕಿರುಚಿತ್ರ

# ಅಸೂಯೆ, ಪಾರಮ್ಯಗಳ ಮೇಲಾಟ



'ಅಮೀಯೆಸ್' ಕಿರುಚಿತ್ರದ ಮೂರು ಪಾತ್ರಗಳು ಮೊದಲಿಗೆ ತೆರೆಯ ಮೇಲಿನ ಪಾತ್ರಗಳಾಗಿ ಕಾಣಿಸುತ್ತವೆ. ಕೊನೆಗೆ ಅವು ನಮ್ಮ ಮನಸೊಳಗಿನ ವಿಕೃತಿಗಳ ಸಂಕೇತಗಳಾಗಿ ಬದಲಾಗುತ್ತವೆ.

■ ಗೌರಿ

ಅಸೂಯೆ ಮತ್ತು ಅಧಿಕಾರ ಸ್ಥಾಪನೆಯ ಹಂಬಲ – ಈ ಎರಡೂ ಮನುಷ್ಯನ ಮೂಲಭೂತ ಗುಣಗಳು. ಇಂದಿನ ಆಧುನಿಕ ಜಗತ್ತಿನ ಮನುಷ್ಯವೃತ್ತಾಂತದ ಕೇಂದ್ರದಲ್ಲಿರುವುದೂ ಇವೆ. ಸಮಾಜದ ಅತಿಸಣ್ಣ ಘಟಕವಾದ ಕುಟುಂಬದಿಂದ ಹಿಡಿದು ಜಾಗತಿಕ ಮಟ್ಟದ ರಾಜಕಾರಣದಲ್ಲಿಯೂ ಮನುಷ್ಯನಕುಲದ ನಡೆಯನ್ನು ನಿರ್ಣಯಿಸುವ ಸಂಗತಿಗಳ ಹಿಂದೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಇರುವುದು ಈ ಗುಣಗಳೇ.

ಕೆನಡಾ ದೇಶದ ಮೇರಿ ಡೇವಿಗ್‌ನಾನ್ ನಿರ್ದೇಶನದ 'ಅಮೀಯೆಸ್' ಕಿರುಚಿತ್ರದಲ್ಲಿಯೂ, ಅಸೂಯೆ ಮತ್ತು ಅಧಿಕಾರ ಸ್ಥಾಪನೆಯ ಹಂಬಲ ಮನುಷ್ಯನನ್ನು ಹೇಗೆಲ್ಲ ಆಟವಾಡಿಸುತ್ತದೆ ಎಂಬುದನ್ನು ತೋರಿಸುವ ಪ್ರಯತ್ನವೇ ಇದೆ. ಇದೊಂದು ರೀತಿಯಲ್ಲಿ ಮಾರಣಾಂತಿಕ ಕಾಯಿಲೆಗೆ ಕಾರಣವಾಗುವ ಅತಿಸೂಕ್ಷ್ಮ ರೋಗಾಣುವನ್ನು ಸೂಕ್ಷ್ಮದರ್ಶಕದಲ್ಲಿ ನೋಡುವ ಯತ್ನ.

ಅಮೀಯೆಸ್ ಅಂದರೆ ಗರ್ಲ್‌ಫ್ರೆಂಡ್ಸ್ ಎಂದು ಅರ್ಥ. ಗರ್ಲ್‌ಫ್ರೆಂಡ್ ಅಂದಾಕ್ಷಣ ನಮಗೆ ಪುರುಷ ನಿರೂಪಕನ ಚಿತ್ರವೊಂದು ಮನಸಲ್ಲಿ ಹುಟ್ಟಿಕೊಂಡುಬಿಡುತ್ತದೆ. ಶೀರ್ಷಿಕೆಯಲ್ಲಿಯೇ ಈ ಸಾರ್ವತ್ರಿಕ 'ಇಮೇಜ್' ಅನ್ನು ಮುರಿಯುತ್ತದೆ ಈ ಕಿರುಚಿತ್ರ. ಇಲ್ಲಿರುವುದು ಮೂವರು ಹೆಣ್ಣುಮಕ್ಕಳು!

ಅಮೀಲೆ, ಆರು ತಿಂಗಳ ನ್ಯೂಜಿಲೆಂಡ್ ಪ್ರವಾಸ ಮುಗಿಸಿ ಊರಿಗೆ ಮರಳಿದ್ದಾಳೆ. ಇದನ್ನು ಸೆಲಬ್ರೇಟ್ ಮಾಡುವುದಕ್ಕೋಸ್ಕರ ತನ್ನಿಬ್ಬರು ಆಪ್ತಸ್ನೇಹಿತೆಯರಾದ ಪಾಸ್ಕೆಲ್ ಮತ್ತು ಮ್ಯೂಡ್ ಜೊತೆಗೆ ತನ್ನ ಮನೆಗೆ ಹೋಗುತ್ತಿದ್ದಾಳೆ.

ಮ್ಯೂಡ್‌ಳನ್ನು ಇಂಪ್ರೆಸ್ ಮಾಡುವುದಕ್ಕೆ ಅಮೀಲೆ ಮತ್ತು ಪಾಸ್ಕಲ್ ನಡುವೆ ಪೈಪೋಟಿ ಇದೆ. ಅದನ್ನು ನಿರ್ದೇಶಕರು ಎಲ್ಲಿಯೂ ಢಾಳಾಗಿ ಕಾಣಿಸುವುದಿಲ್ಲ. ಹಾಗೆ ನೋಡಿದರೆ ಮೊದಲ ದೃಶ್ಯದಲ್ಲಿಯೇ ಅದರ ಸೂಕ್ಷ್ಮ ಸೂಚನೆ ಸಿಗುತ್ತದೆ. ಆದರೆ ಅದು ಪ್ರೇಕ್ಷಕನಿಗೆ ಅರಿವಾಗುವುದು ದ್ವಿತೀಯಾರ್ಧದಲ್ಲಿಯೇ.



ಚಿತ್ರ: ಅಮೀಯೆಸ್ (ಕೆನಡಾ)
ನಿರ್ದೇಶಕಿ: ಮೇರಿ ಡೇವಿಗ್‌ನಾನ್
ನಿರ್ಮಾಣ:ನಿಲ್ಲೀ ಕ್ಯಾರಿಯರ್
ಛಾಯಾಗ್ರಹಣ: ಶಾವ್ನ್ ಪವ್ಲಿನ್
ತಾರಾಗಣ: ರೋಸ್ ಮೇರಿ ಪೆರಿಯಲ್ಟ್, ಮರೀನ್ ಜಾನ್ಸನ್, ಸಬ್ರಿನಾ ಬೆಗಿನ್ ಟೆಗೆಡಾ

ಮೇಲ್ನೋಟಕ್ಕೆ ತುಂಬ ಸರಳವಾದ, ಮೂವರು ಹುಡುಗಿಯರ ಕ್ಷುಲ್ಲಕ ಜಗಳ ಮತ್ತು ಲೈಂಗಿಕ ಅಭಿಲಾಷೆಗಳ ಚಿತ್ರಣದಂತೆ ಕಾಣುವ ಈ ಕಿರುಚಿತ್ರ, ಆ ಸರಳ ಸನ್ನಿವೇಶಗಳ ಮೂಲಕವೇ ತುಂಬ ಗಹನವಾದ ಬದುಕಿನ ಸತ್ಯಗಳನ್ನು ಹಂತ ಹಂತವಾಗಿ ತೆರೆದಿಡುತ್ತದೆ. ಎಷ್ಟರಮಟ್ಟಿಗೆ ಎಂದರೆ ಕಿರುಚಿತ್ರ ಮುಗಿದ ಮೇಲೆ ಚಿತ್ರದಲ್ಲಿನ ಮೂರು ಪಾತ್ರಗಳು ನಮ್ಮೊಳಗಿನ ಸಂಘರ್ಷದ ಸಂಕೇತರೂಪಗಳು ಎಂದು ಅನಿಸಿಬಿಡುವಷ್ಟು!

ಅಮಿಲೆ ಮತ್ತು ಪಾಸ್ಕಲ್ ಇಬ್ಬರಿಗೂ ತಮ್ಮದೇ ಆದ ದೌರ್ಬಲ್ಯ ಮತ್ತು ಶಕ್ತಿಗಳಿವೆ. ಅವುಗಳನ್ನು ಇಟ್ಟುಕೊಂಡೇ ಅವರು ಮ್ಯೂಡ್ ಮೇಲೆ ಪ್ರಭಾವ ಬೀರಲು ಯತ್ನಿಸುತ್ತಾರೆ. ಮ್ಯೂಡ್‌ಗೆ ಈ ಆಟದ ಅರಿವಿಲ್ಲ. ಹಾಗಾಗಿ ಇಬ್ಬರ ಜೊತೆಗೂ ಸಲುಗೆಯಿಂದಲೇ ಇರುತ್ತಾಳೆ. ಈ ಆಟ ಹೇಗಿದೆಯೆಂದರೆ, ಒಮ್ಮೆ ಆ ಕಡೆ ವಾಲುತ್ತ ಮತ್ತೊಮ್ಮೆ ಈ ಕಡೆ ವಾಲುತ್ತ ಗೆದ್ದೆನೆಂದುಕೊಳ್ಳುವಾಗಲೇ ಸೋಲುತ್ತ, ಸೋಲಿನ ಹತಾಶೆಯನ್ನೇ ಇಂಧನವಾಗಿಸಿಕೊಂಡು ಇನ್ನಷ್ಟು ಉದ್ವಿಗ್ನವಾಗಿ ಗೆಲುವಿಗೆ ಯತ್ನಿಸುತ್ತ ಸಾಗುತ್ತದೆ.

ಮೊದಲು ಮಾನಸಿಕವಾಗಿದ್ದ ಈ ಪವರ್‌ಪ್ಲೇ ನಂತರ ಮೌಖಿಕವಾಗುತ್ತದೆ; ಕೊನೆಗೆ ದೈಹಿಕ ಹೊಡೆದಾಟದವರೆಗೂ ಹೋಗುತ್ತದೆ. ರಾತ್ರಿ ಉರುವಲು ತರಲು ಹೋದ ಅಮಿಲೆ ಮೇಲೆ ಪಾಸ್ಕಲ್ ಮುಗಿಬಿದ್ದು ಅವಳನ್ನು ನೆಲಕ್ಕೆ ಕೆಡವಿ 'ನಾನೇ ಶಕ್ತಿಶಾಲಿ' ಎಂದು ಹಲುಬುತ್ತಾಳೆ. ಅವಳ ದೈಹಿಕ ದಾಳಿಗೆ ಸೋಲುವ ಅಮಿಲೆಗೆ ಆ ಸೋಲಿನಿಂದ ಸಿಕ್ಕ ಮ್ಯೂಡ್ ಅನುಕಂಪವೇ ಗೆಲುವಾಗಿ ಬದಲಾಗುತ್ತದೆ.

ಈ ಕಿರುಚಿತ್ರದ ಕೊನೆಯೂ ಅಷ್ಟೇ ಧ್ವನಿಪೂರ್ಣವಾಗಿದೆ. ಅಳುತ್ತಿದ್ದ ತನ್ನನ್ನು ಮ್ಯೂಡ್, ತಬ್ಬಿ ಸಂತೈಸುವಾಗ ತೆರಗಣ್ಣಲ್ಲೇ ಅಮಿಲೆ, ಪಾಸ್ಕಲ್‌ಳನ್ನು ನೋಡುತ್ತಾಳೆ. ಕೊನೆಗೂ ನಾನೇ ಗೆದ್ದೆ ಎಂಬ ಹೂಂಕಾರದ ನೋಟವದು. ಪಾಸ್ಕಲ್ ಈ ಸೋಲನ್ನು ಅರಗಿಸಿಕೊಳ್ಳಲು ಸಾಧ್ಯವಾಗದೆ ಸಮೀಪದ ನದಿಗೆ ಹಾರಿಕೊಳ್ಳುತ್ತಾಳೆ. ಈಜು ಬರದ ಅವಳನ್ನು ಕಾಪಾಡಲು ಮ್ಯೂಡ್ ನದಿಗೆ ಜಿಗಿಯುತ್ತಾಳೆ. ಅದನ್ನು ನೋಡುತ್ತ ದಡದಲ್ಲಿ ನಿಂತ ಅಮಿಲೆಯ ಮುಖಭಾವದೊಂದಿಗೆ ಕಿರುಚಿತ್ರ ಮುಗಿಯುತ್ತದೆ. ಮುಗಿದಂತೆ ಕಂಡರೂ ಮುಗಿಯದೇ ಮುಂದುವರಿಯುವ ಈ ಗೇಮ್ ಮಾತ್ರ ನಮ್ಮೊಳಗೆ ಹಲವು ಧ್ವನಿಗಳನ್ನು ಹೊಮ್ಮಿಸುತ್ತ ರಿಂಗಣಿಸುತ್ತಲೇ ಇರುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2VJCYldಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.